**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಮಾಗಡಿ**

# ಕ್ರಿಮಿನಲ್ ಪ್ರಕರಣ ಸಂಖ್ಯೆ : 4213/ 2022

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಪ್ರದೀಪ್ ಕುಮಾರ್**

**ಚಾಸಾ :- 02 / ಪ್ರಾಸಾ :- 02**

| | |
|---|---|
| ಹೆಸರು | **ಆನಂದ್** |
| ತಂದೆಯ / ಗಂಡನ ಹೆಸರು | **ಹನುಮಂತಯ್ಯ** |
| ವಯಸ್ಸು | **40** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ಚೌಡಿಬೇಗೂರು** |

**ದಿನಾಂಕ: 12-03-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ, ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಚೌಡೇಗೆರೆ ಪಾಳ್ಯದಲ್ಲಿ 2022 ನೇ ಇಸವಿಯಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಚಾಸಾ1 ರವರ ಬಳಿ ಒಡವೆ ಮತ್ತು ದುಡ್ಡನ್ನು ಆರೋಪಿ ತೆಗೆದುಕೊಂಡು ಹೋಗಿರುವ ವಿಚಾರವಾಗಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನಾನು, ಚಾಸಾ-1 ಮತ್ತು 3 ರವರು ಹಾಜರಿದ್ದೇವು. ಸದರಿ ಮಹಜರ್ ನ್ನು ಸಂಜೆ 7 ರಿಂದ 7.30 ರವರೆಗೆ ಜರುಗಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಪೋಲೀಸರು ದಿ.06-04-2022 ರಂದು ಸಂಜೆ 7 ರಿಂದ 7.45 ರವರೆ ಮಹಜರ್ ಕ್ರಮ ಅನುಸರಿಸುತ್ತಾರೆ ಎಂದರೆ ಸರಿ. ನಿಪಿ-2 ರಲ್ಲಿ ಇರುವ ಅಂಶಗಳನ್ನು ನನಗೆ ಓದಿ ತಿಳಿಸಿ ಪೋಲೀಸರು ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು :- ಶ್ರೀ. ಎಂ.ಎನ್ ವಕೀಲರಿಂದ ಆರೋಪಿಗಳ ಪರವಾಗಿ :-**

ಚಾಸಾ-1 ರವರಿಗೆ ನಾನು ಬಾವನಾಗಬೇಕು ಎಂದರೆ ಸರಿ. ಚೌಡಿಬೇಗೂರು ಪಾಳ್ಯದಲ್ಲಿ ಎಷ್ಟು ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಮಹಜರ್ ದಿನ ಬಂಡೆಯನ್ನು ತುಂಬಲು ಯಾವ ಊರಿಗೆ ಹೋಗಿರುತ್ತೀರಿ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಚಾಸಾ-1 ರವರ ಜೊತೆ ಪೋ. ಠಾಣೆಗೆ ಹೋಗಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಮಹಜರ್ ಸ್ಥಳಕ್ಕೆ ಸಂಜೆ 7 ರಿಂದ 7.30 ರ ಸಮಯದಲ್ಲಿ ಬಂದಿರುತ್ತಾರೆ. ಮಹಜರ್ ಸಮಯದಲ್ಲಿ ಕೈನಲ್ಲಿ ಬರೆದುಕೊಂಡಿರುತ್ತಾರಾ ಅಥವಾ ಬೆರಳಚ್ಚು ಮಾಡಿರುತ್ತಾರ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಗೆ ಬಂದಿದ್ದ ಪೋಲೀಸರ ಹೆಸರುಗಳು ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಸ್ಥಳದ ಚೆಕ್ಕುಬಂಧಿ ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಯಾವ ದಿನಾಂಕ ಹಾಗೂ ತಿಂಗಳಲ್ಲಿ ಜರುಗಿಸಿರುತ್ತಾರೆ ಎಂದು ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ಗೆ ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದರೆ ನಾವು ಮೂರು ಜನರು ಮಾತ್ರ ಮಹಜರ್ಗೆ ಸಹಿ ಮಾಡಿರುತ್ತೇವೆ ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಮಹಜರ್ ವೇಳೆಯಲ್ಲಿ

ಅಲ್ಲಿ ಗ್ರಾಮಸ್ತರು ಯಾರು ಯಾರು ಇದ್ದರು ಎಂದರೇ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚೌಡಬೇಗೂರು ದೊಡ್ಡ ಗ್ರಾಮ ಅಲ್ಲಿ ಸುಮಾರು 100 ಮನೆಗಳು ಇವೆ ಎಂದರೆ ಸರಿ. ಮಹಜರ್ ನ್ನು ಪೋಲೀಸರು ಓದಿ ಹೇಳಿರುತ್ತಾರೆ ಎಂದು ನುಡಿದಿದ್ದು, ಯಾರು ಓದಿ ಹೇಳಿರುತ್ತಾರೆ ಎಂ ದು ಹೇಳಲು ಅಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೋಲೀಸರು ಘಟನಾ ಸ್ಥಳಕ್ಕೊ ಬಂದಿರುವುದಿಲ್ಲ ಅಲ್ಲಿ ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನೀವು ಚಾಸಾ-1 ರವರ ಬಾವನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**